## ವಾರ್ಡ್ ನಂ: 83 ಕಾಡುಗುಡಿ ವಾರ್ಡ್ ಕಮಿಟಿ ಸಭೆಯ ನಡುವಳಿಗಳು:-

ದಿನಾಂಕ: 02/01/2021 ರಂದು ಕಾಡುಗುಡಿ ವಾರ್ಡ್ ಸಂಖ್ಯೆ: 83 ರ ವ್ಯಾಪ್ತಿಯಲ್ಲಿ ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂ: ಬಿ12(5)/ಪಿಆರ್/35/2020-21 ದಿನಾಂಕ:21-09-2020 ಆದೇಶದಂತೆ ವಾರ್ಡ್ ಕಛೇರಿಯಲ್ಲಿ ಮಾನ್ಯ ವಾರ್ಡ್ ನೋಡಲ್ ಅಧಿಕಾರಿ, ರವರು ಸದಸ್ಯರು ಹಾಗೂ ಕಮಿಟಿಯ ಕಾರ್ಯದರ್ಶಿ ರವರ ಸಮಕ್ಷಮದಲ್ಲಿ ಸಭೆ ನಡೆಸಲಾಯಿತು.

ಈ ಸಭೆಯಲ್ಲಿ ಈ ಕೆಳಗೆ ತಿಳಿಸಿರುವ ಅಂಶಗಳನ್ನೊಳಗೊಂಡಂತೆ ವಾರ್ಡ್‌ನಲ್ಲಿ ಕಾರ್ಯನಿರ್ವಹಿಸಲು ಸಭೆಯಲ್ಲಿ ತಿರ್ಮಾನಿಸಲಾಯಿತು,

1. ಹಿಂದಿನ ಸಭೆಯಲ್ಲಿ(ದಿನಾಂಕ: 19-12-2020) ಚರ್ಚಿಸಲಾದ ವಿಷಯಗಳು ಮತ್ತು ದೂರುಗಳ ಬಗ್ಗೆ ಕೈಗೊಂಡಿರುವ ಕ್ರಮದ ಬಗ್ಗೆ ಚರ್ಚಿಸಲಾಯಿತು.

2. ಕೋವಿಡ್-19 ಸಾಂಕ್ರಾಮಿಕ ರೋಗ ತಡೆಗಟ್ಟುವ ಸಲುವಾಗಿ ಕೋವಿಡ್ ಪರೀಕ್ಷೆಯನ್ನು ವಾರ್ಡ್ ವ್ಯಾಪ್ತಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಮರ್ಪಕವಾಗಿ ಮಾಡಲಾಗುತ್ತಿದೆ. ಹಾಗೂ ಕೋವಿಡ್ ಪಾಸಿಟಿವ್ ಬಂದಿರುವ ಸುತ್ತ-ಮುತ್ತ ಪ್ರದೇಶಗಳಲ್ಲಿ ಸ್ಯಾನಿಟೈಸರ್ ಮತ್ತು ಔಷದಿಯನ್ನು ಸಿಂಪಡಣೆ ಕಾರ್ಯವನ್ನು ಸಮರ್ಪಕವಾಗಿ ವಾರ್ಡ್ ವ್ಯಾಪ್ತಿಯಲ್ಲಿ ನಿರ್ವಹಿಸಲಾಗುತ್ತಿರುವುದು ಕಂಡು ಬಂದಿರುತ್ತದೆ. ಕೋವಿಡ್ ಸಂಬಂದಿಸಿದಂತೆ ವಾರ್ಡ್ ವ್ಯಾಪ್ತಿಯಲ್ಲಿ ಯಾವುದೇ ದೂರು ಬಂದಿರುವುದಿಲ್ಲ. ಇದೆ ರೀತಿಯಾಗಿ ಕೆಲಸವನ್ನು ಮುಂದುವರೆಸಲು ವಾರ್ಡ್ ನೋಡಲ್ ಅಧಿಕಾರಿ, ರವರು ಸದಸ್ಯರು ಹಾಗೂ ಕಮಿಟಿಯ ಕಾರ್ಯದರ್ಶಿಗಳು ತಿರ್ಮಾನಿಸಿದರು.

   ಕ್ರಮ: ಸಹಾಯಕ ಅಭಿಯಂತರು/ಕಂದಾಯ ಪರಿವೀಕ್ಷಕರು/ಹಿರಿಯ/ ಕಿರಿಯ ಆರೋಗ್ಯ ಪರಿವೀಕ್ಷಕರು

3. Ishamistri Apartment ನಿವಾಸಿಗಳು ಕಸವನ್ನು ರಸ್ತೆಯಲ್ಲಿ ಹಾಕುತ್ತಿರುತ್ತಾರೆ. ಸದರಿ ಅಪಾರ್ಟ್‌ಮೆಂಟ್‌ನವರಿಗೆ ದಂಡ ವಿಧಿಸುವುದು ಹಾಗೂ ಕಾಡುಗುಡಿ ವಾರ್ಡ್ ವ್ಯಾಪ್ತಿಯಲ್ಲಿ ಹಸಿಕಸ / ಒಣಕಸ ವಿಂಗಡನೆಯ ಕುರಿತಾಗಿ ಕರಪತ್ರ ವಿತರಿಸುವ ಮೂಲಕ ಸಾರ್ವಜನಿಕರಲ್ಲಿ ಅರಿವು ಮೂಡಿಸುವಂತೆ ವಾರ್ಡ್ ನೋಡಲ್ ಅಧಿಕಾರಿ, ರವರು ಸೂಚಿಸಿರುವಂತೆ, ಸ್ವಚ್ಚಗೊಳಿಸಿದ್ದು ಜನರಿಗೆ ಈ ಬಗ್ಗೆ ಅರಿವು ಮೂಡಿಸಲು ಕ್ರಮ ವಹಿಸಲಾಗಿದೆ.

   ಕ್ರಮ: ಹಿರಿಯ/ಕಿರಿಯ ಆರೋಗ್ಯ ಪರಿವೀಕ್ಷಕರು

4. ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ದೀಪಗಳು ದುರಸ್ತಿಯಾಗಿರವ ಬಗ್ಗೆ ಸಾರ್ವಜನಿಕರಿಂದ ಅನೇಕ ದೂರುಗಳು ಬಂದಿದ್ದು ಇದನ್ನು ಕೂಡಲೇ ಕ್ರಮ ಕೈಗೊಳ್ಳಲು ಗುತ್ತಿಗೆದಾರರಿಗೆ / ಎಲೆಕ್ಟ್ರಿಕಲ್ ಇಂಜಿನಿಯರ್ ರವರಿಗೆ ಸೂಚಿಸಿದ್ದು, ಇದನ್ನು ಸರಿಪಡಿಸಿ ನಿರ್ವಹಣೆ ಮಾಡುತ್ತಿರುತ್ತಾರೆ ಎಂದು ಸಾರ್ವಜನಿಕರು ವಾರ್ಡ್ ನೋಡಲ್ ಅಧಿಕಾರಿ ರವರು ಸೂಚಿಸಿದಂತೆ, ದುರಸ್ತಿ ಮಾಡಲಾಗಿದ್ದು, ಹೊಸದಾಗಿ ಬೀದಿ ದೀಪಗಳನ್ನು ಅಳವಡಿಸಲು ಸೂಕ್ತ ಕ್ರಮ ವಹಿಸುವಂತೆ ಸೂಚಿಸಿದೆ.

   ಕ್ರಮ: ಸಹಾಯಕ ಅಭಿಯಂತರರು ಮತ್ತು ವಿದ್ಯುತ್ ದೀಪಗಳ ಉಸ್ತುವಾರಿ ಇಂಜಿನಿಯರ್

5. ಕಂದಾಯ ವಸೂಲಿಗಾರರು ಹಾಗೂ ಕಂದಾಯ ಪರಿವೀಕ್ಷಕರುಗಳು ವಾರ್ಡ್ ಕಛೇರಿಯಲ್ಲಿ ಸಾರ್ವಜನಿಕರ ಅನುಕೂಲಕ್ಕೆ ಇರಲು ಸಾರ್ವಜನಿಕರು ಕೋರಿದರು. ಹಾಗೂ ಹಲವು ಗ್ರಾಮಗಳಲ್ಲಿ ಕ್ಯಾಪ್ ಮೂಲಕ ಚುನಾವಣಾ ಐ.ಡಿ. ಕಾರ್ಡ್ (ವೋಟರ್ ಐ.ಡಿ) ಒದಗಿಸಲು ಸಾರ್ವಜನಿಕರು ಕೋರಿದರು. ಅದರಂತೆ ಸೂಕ್ತ ಕ್ರಮ ವಹಿಸಲು ನೋಡಲ್ ಅಧಿಕಾರಿ ರವರು ಕಂದಾಯ ವಸೂಲಿಗಾರು, ವೈಟ್‌ಫೀಲ್ಡ್ ಉಪವಲಯ ರವರಿಗೆ ಸೂಚಿದರು.

   ಕ್ರಮ: ಸಹಾಯಕ ಕಂದಾಯ ಅಧಿಕಾರಿ, ವೈಟ್‌ಫೀಲ್ಡ್ ಉಪವಿಬಾಗ

6. ದಿನ್ನೂರಿನ್ಲಲಿ 3 ಕೊಳವೆ ಬಾವಿ ಕೊರೆಯಲಾಗಿದ್ದು, ಒಂದು ಕೊಳವೆ ಬಾವಿಯಲ್ಲಿ ನೀರು ಸಿಕ್ಕಿರುವುದಿಲ್ಲ. ಮತ್ತೊಂದಕ್ಕೆ ಮೋಟಾರು ಅಳವಡಿಸಿ ನೀರು ಸರಬರಾಜು ಮಾಡಲಾಗುತ್ತಿದೆ. ಮತ್ತೊಂದಕ್ಕೆ ಮೊಟಾರು ಅಳವಡಿಸಲು ಗುತ್ತಿಗೆದಾರರಿಗೆ ಸೂಚಿಸಿದ್ದು, ಕಾಮಗಾರಿ ಪ್ರಗತಿಯಲ್ಲಿದೆ.

   ಕ್ರಮ: ವಾರ್ಡ್ ಅಭಿಯಂತರರು

7. ಅಂಬೇಡ್ಕರ್‌ಗುಟ್ಟಾ ಗ್ರಾಮದಲ್ಲಿ ಕುಡಿಯುವ ನೀರಿಗೆ ಬುಸ್ತರ್ ಪಂಪ್ ಅಳವಡಿಸಲು ಅಲ್ಲಿನ ನಿವಾಸಿಗಳು ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಈ ಹಿಂದಿನ 2-3 ಸಭೆಯಲ್ಲಿ ತಿಳಿಸಲಾಗಿತ್ತು. ಆದರೆ, ಇಲ್ಲಿಯವರೆಗೂ ಕ್ರಮ ಕೈಗೊಂಡಿರುವುದಿಲ್ಲ. ಹಾಗೂ ಈ ಸಭೆಗೆ ಬಿ.ಡಬ್ಲೂ.ಎಸ್.ಎಸ್.ಬಿ ಇಲಾಖೆಯಿಂದ ಯಾರು ಹಾಜರಾಗಿರುವುದಿಲ್ಲ. ಆದ್ದರಿಂದ, ಸದರಿಯವರಿಗೆ ಪತ್ರ ಬರೆಯಲು ಹಾಗೂ ಇನ್ನು ಮುಂದಿನ ಸಭೆಗಳಿಗೆ ತಪ್ಪದೆ ಹಾಜರಾಗಲು ಸೂಕ್ತ ಕ್ರಮ ವಹಿಸಲು ವಾರ್ಡ್ ಅಭಿಯಂತರರು ರವರಿಗೆ ವಾರ್ಡ್ ನೋಡಲ್ ಅಧಿಕಾರಿ, ರವರಿಗೆ ತಿಳಿಸಿರುತ್ತಾರೆ.

ಕ್ರಮ: ಬಿ.ಡಬ್ಲ್ಯೂ.ಎಸ್.ಎಸ್.ಬಿ

8. ಎ.ಬಿ.ವಾಜಪೇಯಿ ರಸ್ತೆ ಮತ್ತು ಕೃಷ್ಣಕುಟೀರ ರಸ್ತೆಯಲ್ಲಿ ವಿದ್ಯುತ್ ದೀಪಗಳಿಲ್ಲದೆ ದಿನೇ ದಿನೇ ಕಳ್ಳತ ಹೆಚ್ಚಾಗುತ್ತಿರುವುದರಿಂದ ವಿದ್ಯುತ್ ಕಂಬಗಳನ್ನು & ದೀಪಗಳನ್ನು ಅಳವಡಿಸಲು ಅಲ್ಲಿನ ನಿವಾಸಿಗಳು ಕೋರಿರುವುದರಿಂದ, ಕಾರ್ಯಪಾಲಕ ಅಭಿಯಂತರರು (ರಸ್ತೆ ಮತ್ತು ಮೂಲಭೂತ ಸೌಕರ್ಯ ವಿಭಾಗ) ರವರಿಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಪತ್ರ ಬರೆದು, ಸೂಕ್ತ ಕ್ರಮ ವಹಿಸಲು ವಾರ್ಡ್ ನೊಡಲ್ ಅಧಿಕಾರಿ, ರವರಿಗೆ ತಿಳಿಸಿರುತ್ತಾರೆ. ಹಾಗೂ ಈ ಸಭೆಗೆ ಬೆಸ್ಕಾಂ ಇಲಾಖೆಯಿಂದ ಮತ್ತು ರಸ್ತೆ ಮತ್ತು ಮೂಲಭೂತ ಸೌಕರ್ಯ ವಿಭಾಗದಿಂದ ಯಾರು ಹಾಜರಾಗಿರುವುದಿಲ್ಲ. ಆದ್ದರಿಂದ, ಸದರಿಯವರಿಗೆ ಪತ್ರ ಬರೆಯಲು ಹಾಗೂ ಇನ್ನು ಮುಂದಿನ ಸಭೆಗಳಿಗೆ ತಪ್ಪದೆ ಹಾಜರಾಗಲು ವಾರ್ಡ್ ನೊಡಲ್ ಅಧಿಕಾರಿ, ರವರು ಸೂಚಿಸಿದಂತೆ, ಬೆಸ್ಕಾಂ ರವರಿಗೆ ಪತ್ರ ಬರೆಯಲಾಗಿದೆ.

ಕ್ರಮ: ಸ.ಕಾ.ಅ (ಬೆಸ್ಕಾಂ), ಕಾ.ಅ (ರ.ಮೂ.ಸೌ) ಮತ್ತು ವಾರ್ಡ್ ಅಭಿಯಂತರರು

9. ಅತಾಶ್ರೀ ರಸ್ತೆ, ಪಟಾಲಮ್ಮ ಬಡಾವಣೆ ಮತ್ತು ಕಾಡುಗುಡಿ ಪ್ಲಾಂಟೇಷನ್ ರಸ್ತೆಗಳಲ್ಲಿ ಹೊಸದಾಗಿ ವಿದ್ಯುತ್ ಕಂಬಗಳನ್ನು & ದೀಪಗಳನ್ನು ಅಳವಡಿಸಲು ಅಲ್ಲಿನ ನಿವಾಸಿಗಳು ಕೋರಿರುವುದರಿಂದ ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಸೂಕ್ತ ಕ್ರಮ ವಹಿಸಲು ವಾರ್ಡ್ ನೊಡಲ್ ಅಧಿಕಾರಿ, ರವರಿಗೆ ತಿಳಿಸಿರುತ್ತಾರೆ. ಹಾಗೂ ಈ ಸಭೆಗೆ ಬೆಸ್ಕಾಂ ಇಲಾಖೆಯಿಂದ ಯಾರು ಹಾಜರಾಗಿರುವುದಿಲ್ಲ. ಆದ್ದರಿಂದ, ಸದರಿಯವರಿಗೆ ಪತ್ರ ಬರೆಯಲು ಹಾಗೂ ಇನ್ನು ಮುಂದಿನ ಸಭೆಗಳಿಗೆ ತಪ್ಪದೆ ಹಾಜರಾಗಲು ವಾರ್ಡ್ ನೊಡಲ್ ಅಧಿಕಾರಿ, ರವರು ತಿಳಿಸಿರುವಂತೆ, ಪತ್ರ ಬರೆಯಲಾಗಿದೆ.

ಕ್ರಮ: ಸ.ಕಾ.ಅ (ಬೆಸ್ಕಾಂ), ಮತ್ತು ವಾರ್ಡ್ ಅಭಿಯಂತರರು

10. ಚನ್ನಸಂದ್ರ ವ್ಯಾಪ್ತಿಯ ಅಡ್ಡ ರಸ್ತೆಗಳಲ್ಲಿ ಕಾವೇರಿ ನೀರಿನ ಕೊಳವೆಗಳು ಹಾಗೂ ಒಳಚರಂಡಿ ವ್ಯವಸ್ತೆ ಇನ್ನು ಬಾಕಿ ಇರುವುದರಿಂದ, ಇದನ್ನು ಪೂರ್ಣಗೊಳಿಸಲು ಸೂಚಿಸಿದ್ದು, ಬಿ.ಡ್ಲ್ಯೂ.ಎಸ್.ಎಸ್.ಬಿ ಇಲಾಖೆಯ ಕೆಲಸ ಮುಗಿದ ನಂತರ ಪಾಲಿಕೆ ವತಿಯಿಂದ ರಸ್ತೆಗಳ ಡಾಂಬರೀಕರಣ/ಅಭಿವೃದ್ಧಿ ಮಾಡಲು ಕ್ರಮ ವಹಿಸಲಾಗುವುದು ಎಂದು ಸಹಾಯಕ ಇಂಜಿನಿಯರ್‌ಗೆ ಸೂಕ್ತ ಕ್ರಮ ವಹಿಸಲು ನೊಡಲ್ ಅಧಿಕಾರಿ ರವರು ಸೂಚಿಸಿದರು.

ಕ್ರಮ: ಸ.ಕಾ.ಅ ಬಿ.ಡ್ಲ್ಯೂ.ಎಸ್.ಎಸ್.ಬಿ

11. ಕಾಡುಗುಡಿ ವಾರ್ಡ್ ವ್ಯಾಪ್ತಿಯಲ್ಲಿ ಸರ್ಕಾರಿ ಜಾಗಗಳ ಕುರಿತಾಗಿ ಸಂಪೂರ್ಣ ಮಾಹಿತಿ ನೀಡುವುದು ಹಾಗೂ ಹೊಸದಾಗಿ ಅಂಗನವಾಡಿ ಕೇಂದ್ರ, ಡಿ.ಡಬ್ಲೂ.ಸಿ.ಸಿ.ಗೆ ಸೂಕ್ತ ಜಾಗವನ್ನು ಗುರುತಿಸಿ ಕೊಡಲು ರೆವಿನ್ಯೂ ಇನ್ಸ್‌ಪೆಕ್ಟರ್ (ತಹಶೀಲ್ದಾರ್ ರವರ ಕಛೇರಿ, ಕೆ.ಆರ್.ಪುರಂ) ರವರಿಗೆ ನೊಡಲ್ ಅಧಿಕಾರಿ ರವರು ಸೂಚಿಸಿದರು.

ಕ್ರಮ: ರೆವಿನ್ಯೂ ಇನ್ಸ್‌ಪೆಕ್ಟರ್, ತಹಶೀಲ್ದಾರ್ ರವರ ಕಛೇರಿ, ಕೆ.ಆರ್.ಪುರಂ

ಕಾಡುಗುಡಿ ವಾರ್ಡ ನಂ:83 ರ ವಾರ್ಡ್ ಕಮಿಟಿಯ ಕಾರ್ಯದರ್ಶಿಯವರಾದ ಶ್ರೀ.ಎಂ.ಎಸ್.ಶಂಕರ್ ಮೂರ್ತಿ, ಸಹಾಯಕ ಅಭಿಯಂತರರು, ರವರು ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಕಾರ್ಯನಿರ್ವಹಿಸಲು ಕೋರುತ್ತಾ, ವಂದನಾರ್ಪಣೆಯನ್ನು ಸಲ್ಲಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

[signature] 02/1/2021

**ವಾರ್ಡ್ ಕಮಿಟಿ ಕಾರ್ಯದರ್ಶಿ**
**ವಾರ್ಡ್ ನಂ: 83 ಕಾಡುಗುಡಿ**

**ಪ್ರತಿಯನ್ನು**

1. ಮಾನ್ಯ ಜಂಟಿ ಆಯುಕ್ತರು, ಬಿ.ಬಿ.ಎಂ.ಪಿ ಮಹದೇವಪುರ ವಲಯ,ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಮುಖ್ಯ ಅಭಿಯಂತರರು, ಬಿ.ಬಿ.ಎಂ.ಪಿ ಮಹದೇವಪುರ ವಲಯ,ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ ಮಹದೇವಪುರ ವಲಯ,ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಎಲ್ಲಾ ಸದಸ್ಯರುಗಳಿಗೆ ಮಾಹಿತಿಗಾಗಿ